ಮೂಲ ದಾವಾ ನಂ. 29/2022

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 01-06-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಮ್. ಡಿ. ಆರ್. ವಕೀಲರಿಂದಃ**

8 ನೇ ಪ್ರತಿವಾದಿಯ ತಂದೆ ಈಗ ಮೃತಪಟ್ಟಿರುತ್ತಾರೆ. ಅವರ ತಂದೆಯ ಹೆಸರು ನನಗೆ ನೆನಪಿಲ್ಲ. 8 ನೇ ಪ್ರತಿವಾದಿಯ ತಂದೆ ಮತ್ತು ನನ್ನ ತಂದೆ ಬೇರೆ ಬೇರೆ ಎಂದರೆ ಸರಿ. ಈ ಮೊದಲು ನನ್ನ ಪಾಟಿ ಸವಾಲಿನಲ್ಲಿ ತಿಳಿಸಿದಂತೆ 1 ರಿಂದ 7 ನೇ ಪ್ರತಿವಾದಿಯರು ಸದ್ರಿ ಆಸ್ತಿಯ ಸ್ವಾದೀನತೆಯನ್ನು ಯಾವಾಗಿನಿಂದ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದ್ರಿ ಸ್ಥಳದಲ್ಲಿ 1 ರಿಂದ 7 ನೇ ಪ್ರತಿವಾದಿಯರು ಮನೆಯನ್ನು ಕಟ್ಟಿಕೊಂಡು ಅನೇಕ ವರ್ಷಗಳಿಂದ ಇದ್ದಾರೆ ಎಂದರೆ ಸರಿ. ಈ ರೀತಿ ಎಷ್ಟು ವರ್ಷಗಳಿಂದ ಅವರು ಅಲ್ಲಿ ಮನೆ ಕಟ್ಟಿಕೊಂಡು ವಾಸವಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಅವರು ಸದ್ರಿ ಸ್ಥಳದಲ್ಲಿ ಅಡಿಕೆ ಮತ್ತು ತೆಂಗಿನ ಮರಗಳನ್ನು ಬೆಳೆಸಿದ್ದಾರೆ ಎಂದರೆ ಸಾಕ್ಷಿ ತೆಂಗಿನ ಮರಗಳನ್ನು ಬೆಳೆಸಿದ್ದಾರೆ ಎಂದು ನುಡಿಯುತ್ತಾರೆ. ಅದು ತೆಂಗಿನ ತೋಟವಾಗಿರುತ್ತದೆ ಎಂದರೆ ಸರಿ. ಸದ್ರಿ ತೆಂಗಿನ ಮರಗಳು ಈಗ ಫಸಲು ಕೊಡುತ್ತಿವೆ ಎಂದರೆ ಸರಿ. ಸದ್ರಿ ಆಸ್ತಿಗಳು ಪೋಡ್ ಹಿಸ್ಸಾ ಆದ ಮೇಲೆ ಅವರವರ ಹೆಸರಿಗೆ ಕಂದಾಯ ದಾಖಲೆಗಳು ಬದಲಾವಣೆಗೊಂಡಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಆಸ್ತಿಗಳಲ್ಲಿ ನನ್ನ ಸ್ವಾದೀನತೆ ಇಲ್ಲ ಎಂದರೆ ಸರಿ. ದಾವಾ ಆಸ್ತಿ 10 ನ್ನು ಹೊರತುಪಡಿಸಿ ಉಳಿದ ಎಲ್ಲಾ ಆಸ್ತಿಗಳು 1 ರಿಂದ 7 ನೇ ಪ್ರತಿವಾದಿಯ ಸ್ವಾದೀನತೆಯಲ್ಲಿವೆ ಎಂದರೆ ಸರಿ. 1 ರಿಂದ 7 ನೇ ಪ್ರತಿವಾದಿಯರ ಸ್ವಾದೀನತೆಗೆ ನನ್ನದು ಯಾವದೆ ತಕರಾರು ಇಲ್ಲ ಎಂದು ಹೇಳಿದ್ದು ಸದ್ರಿ ಸ್ವಾದೀನತೆ ಹೊಂದಿರುವ ಆಸ್ತಿಗಳು ಎಂದರೆ ದಾವಾ ಆಸ್ತಿ 10 ನ್ನು ಹೊರತುಪಡಿಸಿ ಉಳಿದ ಆಸ್ತಿಗಳಾಗಿರುತ್ತವೆ ಎಂದರೆ ಸರಿ . ನಾನು ಮೌಖಿಕ ವಿಭಾಗಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಾವಾ ಆಸ್ತಿಗಳು ಯಾವಾಗ ಪೋಡ್ ಹಿಸ್ಸಾ ಆದವು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ದಾವಾ ಆಸ್ತಿಗಳು ಯಾವಾಗ ಮ್ಯುಟೇಷನ್ ಎಂಟ್ರಿ ಆಯಿತು ಮತ್ತು ಪಹಣಿ ಪತ್ರಗಳು ಆದವು ಎಂದು ನನಗೆ ಮಾಹಿತಿ ಇಲ್ಲ. ಸದ್ರಿ ಪಹಣಿ ಪತ್ರಿಕೆಗಳು ಆಗಲು ಯಾವ ದಾಖಲೆಯನ್ನು ಆಧರಿಸಿದ್ದವು ಎಂದು ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಗಳು ಮೂಲತಃ 8 ನೇ ಪ್ರತಿವಾದಿಯ ಅಜ್ಜಿಗೆ ಸೇರಿದ್ದಾಗ ಅವರು ಯಾವ ರೀತಿ ಆಸ್ತಿ ಹೋಗಬೇಕು ಎಂದು ತಿಳಿಸಿದ್ದರು ಎಂದು ನನಗೆ ಮಾಹಿತಿ ಇಲ್ಲ. 8 ನೇ ಪ್ರತಿವಾದಿಯ ಅಜ್ಜಿ ಹೇಳಿದ ರೀತಿಯಲ್ಲೇ 1 ರಿಂದ 7 ನೇ ಪ್ರತಿವಾದಿಯರು ಆಸ್ತಿಯ ವಹಿವಾಟು ಮಾಡಿಕೊಂಡು ಬಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿಯ ತಾಯಿ ಜೀವಂತ ಇದ್ದಾಗಲೇ 1 ರಿಂದ 7 ನೇ ಪ್ರತಿವಾದಿಯರು ಸದ್ರಿ ಆಸ್ತಿಗಳ ವಹಿವಾಟು ಮಾಡಿಕೊಂಡು ಬಂದಿದ್ದರು ಎಂದರೆ ಸರಿ. ಸದ್ರಿ ಆಸ್ತಿಗಳು 8 ನೇ ಪ್ರತಿವಾದಿಯ ತಾಯಿ ಜೀವಂತ ಇದ್ದಾಗಲೇ ಮೌಖಿಕವಾಗಿ ಹಂಚಿಕೆಯಾಗಿ ವಹಿವಾಟು ಮಾಡಿಕೊಂಡು ಬರಲಾದ ಆಸ್ತಿಗಳು ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯ ತಂದೆ ಆಕೆಯನ್ನು ಬಿಟ್ಟು ಹೋದಾಗ 8 ನೇ ಪ್ರತಿವಾದಿಯ ತಾಯಿ 8 ನೇ ಪ್ರತಿವಾದಿಯ ಅಜ್ಜಿಯ ಹತ್ತಿರ ಆಕೆಯನ್ನು ದೇಕರೇಖಿಗೆ ಇಟ್ಟು ಹೋಗಿದ್ದರು ಎಂದರೆ ಸರಿಯಲ್ಲ. ಆದ್ದರಿಂದ 8 ನೇ ಪ್ರತಿವಾದಿಯ ಅಜ್ಜಿ ದಾವಾ ಆಸ್ತಿ 10 ನ್ನು 8 ನೇ ಪ್ರತಿವಾದಿಗೆ ಮೌಖಿಕವಾಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಗೆ ಹಿಸ್ಸೆ ಮೂಲಕ ಬರಬೇಕಾದಂತಹ ಆಸ್ತಿ ಕೊಡದೇ ಇದ್ದರೂ ದಾವಾ ಆಸ್ತಿ 10 ನ್ನು 8 ನೇ ಪ್ರತಿವಾದಿಯ ಅಜ್ಜಿ ಆಕೆಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯ ಅಜ್ಜಿಗೆ ದಾವಾ ಆಸ್ತಿ 10 ರ ಮೇಲೆ ಸಂಪೂರ್ಣ ಹಕ್ಕು ಇದ್ದ ಕಾರಣ ಆಕೆ ಜೀವಂತ ಇದ್ದಾಗ ಅದನ್ನು 8 ನೇ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನ ಹೇಳಿದಂತೆ ನಾನು 8 ನೇ ಪ್ರತಿವಾದಿಯ ಖಾಸಾ ಸಹೋದರನೂ ಅಲ್ಲ ಮತ್ತು ದಾವಾ ಐಟಂ 10 ರ ಮೇಲೆ ನನಗೆ ಯಾವದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ.

8 ನೇ ಪ್ರತಿವಾದಿಯ ತಂದೆ ಮೃತಪಟ್ಟಿದ್ದಾರೆ ಎನ್ನುವ ಕುರಿತು ನನ್ನ ಹತ್ತಿರ ದಾಖಲೆ ಇಲ್ಲ ಎಂದರೆ ಸಾಕ್ಷಿ ನನ್ನ ಹತ್ತಿರ ಮರಣ ಪ್ರಮಾಣಪತ್ರ ಇದೆ ಎಂದು ನುಡಿಯುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಆ ರೀತಿ ಪ್ರಮಾಣಪತ್ರ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯ ತಾಯಿಗೆ ನನ್ನ ತಂದೆಯ ಜೊತೆ ಮದುವೆ ಆಗಿದೆ ಎನ್ನುವ ಬಗ್ಗೆ ಯಾವದೇ ದಾಖಲೆ ಇಲ್ಲ. ದಾವಾ ಆಸ್ತಿಗಳ ಮೇಲೆ ನನಗೆ ಸ್ವಾಧೀನತೆ ಇದ್ದರೆ ಪ್ರತಿವಾದಿಯರ ಸ್ವಾಧೀನತೆಗೆ ನಾನು ತಕರಾರು ಮಾಡುತ್ತಿದ್ದೆ ಎಂದರೆ ಸಾಕ್ಷಿ ನಾನು ತಕರಾರು ಮಾಡಿದ್ದೇನೆ ಎಂದು ನುಡಿಯುತ್ತಾರೆ. 9 ನೇ ಪ್ರತಿವಾದಿ 8 ನೇ ಪ್ರತಿವಾದಿಯಿಂದ ಕಾನೂನು ಬದ್ಧವಾಗಿ ಕ್ರಯಕ್ಕೆ ಪಡೆದಿದ್ದು ಅದರಲ್ಲಿ ನನಗೆ ಯಾವದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃಶ್ರೀ ಜಿ.ವಿ. ಎಸ್ ವಕೀಲರಿಂದಃ</u>**

ಈ ಹಂತದಲ್ಲಿ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.